**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆಃ 774/2021**

**ಸಾಕ್ಷಿಯನ್ನು ದಿಃ 08.04.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ.NN ವಕೀಲರಿಂದಃ**

ನಾನು 10 ನೇ ತರಗತಿ ಓದಿದ್ದೇನೆ. ನಾನು ಟೈಲರಿಂಗ್ ಮಾಡುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಆರೋಪಿಗೆ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ನನಗೆ ಇತ್ತು ಎಂದು ತೋರಿಸಲು ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಪಡಿಸಿಲ್ಲ ಹಾಜರುಪಡಿಸುತ್ತೇನೆ. ನನಗೆ ತಿಂಗಳಿಗೆ ರೂ.5 ರಿಂದ 6 ಸಾವಿರ ಆದಾಯ ಇದೆ. ರೂ.3 ಸಾವಿರ ತಿಂಗಳಿಗೆ ಖರ್ಚಿದೆ. ನನ್ನ ಬಳಿ ರೇಷಾನ್ ಕಾರ್ಡ್ ಇಲ್ಲ. ಆರೋಪಿಗೆ ಸಾಲಕೊಟ್ಟ ತಾರೀಖು ಮರೆತಿದ್ದೇನೆ. ಆದರೆ 2016 ಫೆಬ್ರವರಿ ತಿಂಗಳಿನಲ್ಲಿ ಸಾಲ ಕೊಟ್ಟಿದ್ದೇನೆ. ಆರೋಪಿಗೆ ಸಾಲ ಕೊಟ್ಟ ತಾರೀಖನ್ನು ನೋಟೀಸು , ದೂರು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ನಾನು ನಗದಾಗಿ ಹಣ ಕೊಟ್ಟಿದ್ದೇನೆ. ಆ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ರೂ.20 ಸಾವಿರಕ್ಕೂ ಹೆಚ್ಚು ಹಣದ ವ್ಯವಹಾರವನ್ನು ಚೆಕ್ , ಡಿಡಿ ಅಥವಾ ಆರ್ ಟಿ ಜಿ ಎಸ್ ಮೂಲಕ ಮಾಡಬೇಕು ಎಂದರೆ 2016 ರಲ್ಲಿ ಆ ಬಗ್ಗೆ ನನಗೆ ಗೊತ್ತಿರಲಿಲ್ಲ. ಆರೋಪಿ ಶುಂಠಿ ವ್ಯಾಪಾರ ಮಾಡುವ ಸಲುವಾಗಿ ನನ್ನಿಂದ ಸಾಲ ಪಡೆದುಕೊಂಡರು. ಆ ಬಗ್ಗೆ ನೋಟೀಸು,ದೂರು ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ಆರೋಪಿ ನನಗೆ ದೂರದ ಸಂಬಂಧಿ. ಆರೋಪಿ ಮೈಸೂರಿನಲ್ಲಿ ವಾಸ ಮಾಡಲು ಪ್ರಾರಂಭಿಸಿ ಎಷ್ಟು ವರ್ಷ ಆಯಿತು ಎಂದರೆ ಗೊತ್ತಿಲ್ಲ. ನಾನು ಹಣ ಕೊಟ್ಟಾಗ ಇಲ್ಲಿಯೇ ವಾಸ ಇದ್ದರು. ನಾನು ಹಣ ಕೊಟ್ಟ 2 ವರ್ಷಗಳ

ನಂತರ ಆರೋಪಿ ಮೈಸೂರಿಗೆ ವಾಸ ಬದಲಾಯಿಸಿರಬಹುದು. 2020 ಡಿಸೆಂಬರ್ ತಿಂಗಳಿನಲ್ಲಿ ಆರೋಪಿ ನನಗೆ ಚೆಕ್ ಕೊಟ್ಟರು. ನಾನು ಹಣ ಕೊಟ್ಟಾಗ ಆರೋಪಿಯಿಂದ ದಾಖಲೆಯನ್ನು ಪಡೆದುಕೊಳ್ಳಲಿಲ್ಲ. 2016 ರಲ್ಲಿ ಹಣಕಾಸಿನ ಮಾತುಕತೆ ನಡೆಯಿತು. ತಾರೀಖು ತಿಂಗಳು ನೆನಪಿಲ್ಲ. ನಾನು ದಾಖಲೆಗಳಿಲ್ಲದೇ ಸಾಲ ಕೊಡುವ ಅಭ್ಯಾಸ ಇಟ್ಟು ಕೊಂಡಿಲ್ಲ.

ನನ್ನಿಂದ ಹಣ ಪಡೆದುಕೊಂಡಾಗ 3 ರಿಂದ 4 ತಿಂಗಳಿನಲ್ಲಿ ವಾಪಸ್ಸು ಕೊಡುವುದಾಗಿ ಹೇಳಿದರು. 4 ತಿಂಗಳಾದ ನಂತರ ಏನಾಯಿತು ಎಂದರೆ ಕೊಡುತ್ತೇನೆ ಎಂದು ಹೇಳುತ್ತಾ ಬಂದರು. 4 ತಿಂಗಳಾದ ನಂತರ ಆರೋಪಿಯ ವಿರುದ್ಧ ಪೊಲೀಸ್ ಠಾಣೆಗೆ ದೂರುಕೊಡುವುದಾಗಲೀ ನೋಟೀಸು ನೀಡುವುದಾಗಲೀ ಮಾಡಿದ್ದೀರಾ ಎಂದರೆ ಇಲ್ಲ. 4 ತಿಂಗಳಾದ ನಂತರ ನೀವು ಅವರನ್ನು ಹಣ ಕೊಡುವಂತೆ ಕೇಳಿಲ್ಲವೇ ಎಂದರೆ ಕೇಳುತ್ತಾ ಬಂದಿದ್ದೆ. 3 ತಿಂಗಳಿಗೊಂದು ಬಾರಿ, 4 ತಿಂಗಳಿಗೊಂದು ಬಾರಿ , 6 ತಿಂಗಳಿಗೊಂದು ಬಾರಿ ಕೇಳುತ್ತಾ ಬಂದಿದ್ದೆ. ಆ ಬಗ್ಗೆ ನೋಟೀಸು , ದೂರು ಮತ್ತು ಪ್ರಮಾಣಪತ್ರದಲ್ಲಿ ಹೇಳಿದ್ದೀರಾ ಎಂದರೆ ಇಲ್ಲ. ದಿನಾಂಕಃ 10.12.2020 ರಲ್ಲಿ ಆರೋಪಿ ನನಗೆ ಚೆಕನ್ನು ಕೊಟ್ಟರು. ಅದೇ ದಿನ ಡ್ರಾ ಮಾಡುವಂತೆ ಹೇಳಿದ್ದಾರೆಯೇ ಎಂದರೆ ಇಲ್ಲ. ದಿನಾಂಕಃ 29.12.2020 ರಂದು ಚೆಕನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಆರೋಪಿ ಹೇಳಿದ್ದರು. ಆ ಬಗ್ಗೆ ನೋಟೀಸು ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಇಲ್ಲ. ಚೆಕನ್ನು ನೀವು ಭರ್ತಿ ಮಾಡಿದ್ದೀರಾ ಎಂದರೆ ಇಲ್ಲ ಆರೋಪಿಯೇ ಭರ್ತಿ ಮಾಡಿ ಕೊಟ್ಟಿದ್ದಾರೆ. ಆರೋಪಿ ಚೆಕನ್ನು ಭರ್ತಿ ಮಾಡಿ ಕೊಡದೇ ಇದ್ದರೂ ಕೂಡ ಭರ್ತಿ ಮಾಡಿ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2021 ರಲ್ಲಿ ಆರೋಪಿಗೆ ನೋಟೀಸು ಕಳುಹಿಸಿದ್ದೇನೆ. ಆರೋಪಿಯ ಮೈಸೂರು ವಿಳಾಸಕ್ಕೆ ನೋಟೀಸು ಕಳುಹಿಸಿಲ್ಲ ಎಂದರೆ ಇಲ್ಲ. ಕುಶಾಲ್ ಕುಮಾರ್ ನನ್ನ ತಮ್ಮ. ಅವರು ಸರ್ಕಾರಿ ನೌಕರರು. ಆರೋಪಿಯ ವಿರುದ್ಧ ನನ್ನ ತಮ್ಮ ಕುಶಾಲ್ ಕುಮಾರ್ ರವರು ಹುಣಸೂರು 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಿಸಿ ನಂ.439/2021 ರಂತೆ ಚೆಕ್ಕಿನ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದುನುಡಿದು ನಂತರ ಗೊತ್ತಿಲ್ಲ ಎನ್ನುತ್ತಾರೆ. ನನಗೂ ಆರೋಪಿಗೂ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ಕೊಟ್ಟಿದ್ದನ್ನು ನನ್ನ ತಾಯಿ ನೋಡಿದ್ದಾರೆ. ಈಗ ಅವರು ತೀರಿಕೊಂಡಿದ್ದಾರೆ. ಆರೋಪಿಗೆ ನಾನು ಯಾವುದೇ ಸಾಲ ಕೊಡದೇ ಇದ್ದರೂ ಕೂಡ ಸಾಲ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಕುಶಾಲ್ ಕುಮಾರ್ ಮತ್ತು ಆರೋಪಿಯ ಮಧ್ಯೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಗೊತ್ತಿಲ್ಲ. ಆರೋಪಿ ನನ್ನ ತಮ್ಮನೊಂದಿಗೆ ಮಾಡಿದ ಹಣದ ವ್ಯವಹಾರದ ಭದ್ರತೆಗಾಗಿ ನಿಪಿ-1 ಮತ್ತು ಇತರ ಚೆಕನ್ನು ಆರೋಪಿ ನನ್ನ ತಮ್ಮನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ನನ್ನ ತಮ್ಮನೊಂದಿಗೆ ಹಣದ ವ್ಯವಹಾರವನ್ನು ತೀರಿಸಿದರೂ ಸಹ ನನ್ನ ತಮ್ಮ ಆರೋಪಿಗೆ ಚೆಕನ್ನು ವಾಪಸ್ಸು ಕೊಡಲಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ನಾನು ಮತ್ತು ನನ್ನ ತಮ್ಮ ಆರೋಪಿಯ ವಿರುದ್ಧ ಅನ್ಯತಾ ಪಾಯಿದೆ ಪಡೆಯುವ ಸಲುವಾಗಿ ಸುಳ್ಳು ಕೇಸಗಳನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಚೆಕ್ ಸಂಖ್ಯೆ: 269606. ನನಗೆ ರೂ.5 ಲಕ್ಷ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ದಿನಾಂಕಃ 12.02.2021 ರಂದು ಚೆಕನ್ನು ಬ್ಯಾಂಕಿಗೆ ಹಾಕಿದೆ.

**ಸಿ.ಸಿ. ಸಂಖ್ಯೆ 774/2021** **ಪ್ರಾಸಾ-1**

ದಿನಾಂಕಃ 29.12.2020 ರಂದು ಚೆಕನ್ನು ಏಕೆ ಬ್ಯಾಂಕಿಗೆ ಹಾಕಲಿಲ್ಲ ಎಂದರೆ ಸ್ವಲ್ಪ ಕಾದು ನೋಡೋಣ ಎಂದು ಅಂದು ಕೊಂಡಿದ್ದೆ. ಈ ಬಗ್ಗೇ ನೋಟೀಸು , ದೂರು ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಹೇಳಿದ್ದೇನೆ. ದಿನಾಂಕಃ 12.02.2021 ರಂದು ಚೆಕನ್ನು ಬ್ಯಾಂಕಿಗೆ ಹಾಜರುಪಡಿಸಿದ ಬಗ್ಗೆ ದೂರಿನಲ್ಲಿ ನಮೂದಿಲ್ಲ ಎಂದರೆ ನಮೂದಿಸಿದ್ದೇನೆ. ಆ ರೀತಿ ನಮೂದಿಸದೇ ಇದ್ದರೂ ಸಹ ನಮೂದಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.